# ರಾಮಕೃಷ್ಣ ಮಿಷನ್ ಸೇವಾಶ್ರಮ (ಉಚಿತ ಆಸ್ಪತ್ರೆ)

ಸ್ವಾಮಿ ವಿವೇಕಾನಂದ ಮಾರ್ಗ, ಬೃಂದಾವನ, ಮಥುರಾ ಜಿಲ್ಲೆ, ಉತ್ತರ ಪ್ರದೇಶ – 281 121

ಫೋನ್: 0565–244310, 2443310(ಫ್ಯಾಕ್ಸ್)

ಇ–ಮೈಲ್: rkmsvrnd@sancharnet.in; mtr_rkmsvrnd@sancharnet.in ; Website:rkmsvrnd.


## 'ಕಾಲಾ ಬಾಬು ಕುಂಜ್' – ಒಂದು ಮನವಿ

**ಬೃಂದಾವನ –** ಇದು ಯಮುನೆಯ ತಟದಲ್ಲಿರುವ ಶ್ರೀಕೃಷ್ಣನ ದಿವ್ಯ ಲೀಲಾಸ್ಥಾನ. ಬೃಂದಾವನದ ಪರಿಸರವು ಭಕ್ತರನ್ನು ಉನ್ನತ ಮಟ್ಟದ ಭಕ್ತಿಭಾವದಿಂದ ತುಂಬಿಬಿಡುವುದು. ಈ ಪವಿತ್ರಭೂಮಿಗೆ ಶ್ರೀಕೃಷ್ಣ ಚೈತನ್ಯ ಮತ್ತು ಶ್ರೀರಾಮಕೃಷ್ಣರು ತಮ್ಮ ಅವತಾರ ಕಾಲದಲ್ಲಿ, ಭೇಟಿಕೊಟ್ಟು ಪವಿತ್ರಗೊಳಿಸಿದ್ದಾರೆ. ಶ್ರೀಕೃಷ್ಣನ ದಿವ್ಯಲೀಲಾ ಕ್ಷೇತ್ರವಾದ ಬೃಂದಾವನವು ಭಕ್ತಿಯುಗದ ಮಹಾತ್ಮರಾದ ಸೂರದಾಸ, ಮೀರಾಬಾಯಿ ಹಾಗೂ ರೂಪ ಮತ್ತು ಸನಾತನ ಗೋಸ್ವಾಮಿಗಳ ಸಾಧನಾಕ್ಷೇತ್ರವೂ ಆಗಿದೆ.



ರಾಮಕೃಷ್ಣ ಮಿಷನ್ ಸೇವಾಶ್ರಮವು ಈ ಪುಣ್ಯ ಭೂಮಿಯ ಜನಸಮುದಾಯಕ್ಕೆ 1907 ರಿಂದಲೂ ತನ್ನ ಆಸ್ಪತ್ರೆ ಮತ್ತು ಇತರ ಸೇವಾಕಾರ್ಯಗಳ ಮೂಲಕ ಸೇವೆ ಸಲ್ಲಿಸುತ್ತ ಬಂದಿದೆ.

ಶ್ರೀರಾಮಕೃಷ್ಣರ ನಿಕಟ ಭಕ್ತರಾದ ಬಲರಾಮ ಬಸುವು ಈ ಪವಿತ್ರ ವ್ರಜಭೂಮಿಯಲ್ಲಿ **'ಕಾಲಾ ಬಾಬು ಕುಂಜ'** ಎಂಬ ಹೆಸರಿನ ತನ್ನ ವಂಶಸ್ಥರ ನಿವಾಸವನ್ನು ಹೊಂದಿದ್ದರು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ, ಶ್ರೀಮಾತೆ ಶಾರದಾ ದೇವಿಯವರು 1886ರಲ್ಲಿ ಬೃಂದಾವನಕ್ಕೆ ಬಂದಾಗ, ಈ ಮನೆಯಲ್ಲಿ ಸುಮಾರು ಒಂದು ವರ್ಷ ಕಾಲ ತಂಗಿದ್ದರು. ತಮ್ಮ ಮುಂದಿನ ಭೇಟಿಗಳಲ್ಲಿ ಕೂಡ, ಶ್ರೀಮಾತೆಯವರು ಈ ನಿವಾಸದಲ್ಲಿಯೇ ಇರುತ್ತಿದ್ದರು. ಅದಲ್ಲದೆ, ಅವರು ಸ್ವಾಮಿ ಯೋಗಾನಂದರಿಗೆ ಮಂತ್ರದೀಕ್ಷೆಯನ್ನು ಕೊಟ್ಟದ್ದೂ ಇದೇ ಸ್ಥಳದಲ್ಲಿ. ವಿವಿಧ ಕಾಲಘಟ್ಟಗಳಲ್ಲಿ ಸ್ವಾಮಿ ವಿವೇಕಾನಂದ, ಸ್ವಾಮಿ ಬ್ರಹ್ಮಾನಂದ ಮತ್ತಿತರ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರು ಇಲ್ಲಿ ಉಳಿದುಕೊಂಡಿದ್ದರು. 1907 ರಲ್ಲಿ ರಾಮಕೃಷ್ಣ ಮಿಷನ್ನಿನ ಬೃಂದಾವನ ಶಾಖೆ ಆರಂಭಗೊಂಡಿದ್ದೂ ಇದೇ ತಾಣದಲ್ಲಿ.

**'ಕಾಲಾ ಬಾಬು ಕುಂಜ್' –** ಈ ನಿವಾಸದ ಮಹತ್ವವನ್ನು ಮನಗಂಡು, ಬೃಂದಾವನದ ರಾಮಕೃಷ್ಣ ಮಿಷನ್ ಸೇವಾಶ್ರಮವು ಈ ಮನೆಯನ್ನು ತನ್ನ ವಶಕ್ಕೆ ತೆಗೆದುಕೊಂಡು ಒಂದು ಸ್ಮಾರಕವನ್ನು ನಿರ್ಮಿಸಲು ಪ್ರಯತ್ನಿಸುತ್ತಿದೆ. ಇದರಿಂದ ಅಲ್ಲಿ ಸಂನ್ಯಾಸಿಗಳು ಮತ್ತು ಗೃಹಸ್ಥ ಭಕ್ತರು ಉಳಿದುಕೊಂಡು ಈ ಸ್ಥಳದ ಆಧ್ಯಾತ್ಮಿಕ ಪರಿಸರದ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೆ. ಇತ್ತೀಚಿಗೆ, ಈ ಮನೆಯಲ್ಲಿ ಶ್ರೀಮಾತೆಯವರು ವಾಸ್ತವ್ಯ ಮಾಡಿದ್ದ ಸಣ್ಣ ಭಾಗವನ್ನು 38 ಲಕ್ಷ ರೂಪಾಯಿಗಳಿಗೆ ಕೊಂಡುಕೊಳ್ಳಲಾಯಿತು. ಆದರೆ ಅದರ ಪಕ್ಕದ ಭಾಗವನ್ನು ಕೊಂಡುಕೊಳ್ಳಬೇಕಾಗಿದೆ. ಇಲ್ಲದಿದ್ದರೆ, ಇಡೀ ಯೋಜನೆಯು ಅಪೂರ್ಣವಾಗಿಯೇ ಉಳಿದುಬಿಡುವುದು. ಮನೆಯ ಉಳಿದ ಭಾಗವನ್ನು ಕ್ರಯಕ್ಕೆ ತೆಗೆದುಕೊಳ್ಳುವುದಕ್ಕೆ ಮತ್ತು ಅದರ ನವೀಕರಣಕ್ಕಾಗಿ **ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳ ಖರ್ಚು ತಗುಲಬಹುದೆಂದು ಅಂದಾಜು ಮಾಡಲಾಗಿದೆ.**

**ಈ ಪವಿತ್ರ ಕೈಂಕರ್ಯಕ್ಕೆ ತಾವುಗಳು ಉದಾರವಾಗಿ ಧನಸಹಾಯವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ. ಚೆಕ್ ಮತ್ತು ಡ್ರಾಫ್ಟ್‌ಗಳನ್ನು 'Ramakrishna Mission Sevashrama, Vrindaban' – ಈ ಹೆಸರಿಗೆ ಬರೆದು ಕೆಳಗಿನ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ. ದೇಣಿಗೆಗಳಿಗೆ 80–ಜಿ ಅಧಿನಿಯಮದ ಪ್ರಕಾರ ಆದಾಯ ತೆರಿಗೆ ವಿನಾಯಿತಿ ಇರುತ್ತದೆ.**

**Ramakrishna Mission Sevashrama**
**Vrindaban P.O.**
**Dt. Mathura, U.P. 281 121**

**ಸ್ವಾಮಿ ಸುಪ್ರಕಾಶಾನಂದ**
**ಕಾರ್ಯದರ್ಶಿ**

ಸಂಪಾದಕೀಯ

# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ವಿಜ್ಞಾನ ಮತ್ತು ಧರ್ಮ

## 'ದೇವರು ದಾಳವನ್ನೇನೂ ಹಾಕುವುದಿಲ್ಲ'

"ದೇವರು ಜಗತ್ತಿನ ವಿಷಯದಲ್ಲಿ ದಾಳವನ್ನೇನೂ ಹಾಕುವುದಿಲ್ಲ" (God does not play dice with the world) – ಇದು ಖ್ಯಾತ ವಿಜ್ಞಾನಿ ಐನ್‌ಸ್ಟೈನ್‌ರ ಪ್ರಸಿದ್ಧ ಉದ್ಗಾರ. ಒಟ್ಟು ವಿಜ್ಞಾನದ ನಿಲುವು ಕೂಡ ಇದೇ ಆಗಿದೆ. ಬಾಹ್ಯ ಪ್ರಪಂಚದ ಎಲ್ಲ ಕ್ರಿಯೆಗಳು ಕೆಲವು ನಿರ್ದಿಷ್ಟ ನಿಯಮಗಳ ಪ್ರಕಾರ ನಡೆಯುತ್ತವೆ ಎನ್ನುವುದು ವಿಜ್ಞಾನದ ಮೂಲಭೂತ ಸಿದ್ಧಾಂತ. ಆ ನಿಯಮಗಳನ್ನು ಕಂಡುಹಿಡಿಯುವುದರಲ್ಲಿ ಅದು ನಿರತವಾಗಿದೆ. ಹೀಗಾಗಿ ಈ ವಿಶ್ವಕ್ರಿಯೆಯನ್ನು ಒಂದು 'ಬುದ್ಧಿಶಕ್ತಿ' (Intelligence) ನಿಯಂತ್ರಿಸುತ್ತದೆ ಎನ್ನುವುದನ್ನು ವಿಜ್ಞಾನಿಗಳು ಒಪ್ಪುವುದಿಲ್ಲ. ಏಕೆಂದರೆ, ಅದನ್ನು ಅವರು ಇದುವರೆಗೆ ಅರಿತಿರುವ ಅನ್ವೇಷಣಾ ವಿಧಾನಗಳಿಂದ ಪರೀಕ್ಷಿಸಲಾಗಲಿ, ಸಿದ್ಧಾಂತವಾಗಿ ಆಲೋಚಿಸಲಾಗಲಿ ಸಾಧ್ಯವಾಗಿಲ್ಲ. ಹೀಗಾಗಿ ವಿಶ್ವಕರ್ತಾರನೆಂದು ಧರ್ಮಗಳು ಹೇಳುವ ಭಗವಂತನ ವಿಷಯದಲ್ಲಿ ವಿಜ್ಞಾನವು ಇನ್ನೂ ಸಂದೇಹಾಸ್ಪದ ನಿಲುವನ್ನೇ ತಾಳಿದೆ.

> ಆಧುನಿಕ ವಿಜ್ಞಾನದ ಆವಿಷ್ಕಾರಗಳನ್ನು ನೈತಿಕ ಮತ್ತು ಭೌತಿಕ ಕ್ಷೇತ್ರಗಳಲ್ಲಿ ಒಪ್ಪಿಕೊಂಡು ಕೆಲವು ವೇಳೆ ಅದಕ್ಕಿಂತಲೂ ಮುಂದುವರಿದಿರುವ ಧರ್ಮವೆಂದರೆ ಅದ್ವೈತವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಆದಕಾರಣವೇ ಅದು ಆಧುನಿಕ ವಿಜ್ಞಾನಿಗಳ ಮೆಚ್ಚುಗೆಗೆ ಪಾತ್ರವಾಗಿದೆ. ಹಿಂದಿನ ಕಾಲದ ದ್ವೈತಸಿದ್ಧಾಂತಗಳು ಅವರಿಗೆ ಸಾಲದಾಗಿವೆ, ಅವರ ಆವಶ್ಯಕತೆಯನ್ನು ತೃಪ್ತಿಪಡಿಸಲಾರದಾಗಿವೆ.
>
> – ಸ್ವಾಮಿ ವಿವೇಕಾನಂದ

ಮಧ್ಯಕಾಲೀನ ಯುಗದ ಯೂರೋಪಿನಲ್ಲಿ ಧರ್ಮ ಮತ್ತು ವಿಜ್ಞಾನಗಳ ನಡುವೆ ಒಂದು ಬಗೆಯ ಸಮರವೇ ಏರ್ಪಟ್ಟಿತ್ತು. ಆಗ ಧರ್ಮ ಎನ್ನುವುದು ಕ್ರೈಸ್ತ ಕ್ಯಾಥೊಲಿಕ್ ಚರ್ಚ್‌ನ ಸರ್ವಸ್ವತ್ತಾಗಿ ಹೋಗಿತ್ತು. ಹೀಗಾಗಿ ಧರ್ಮದ ವಿವಿಧ ಬಗೆಯ ಅಭಿಪ್ರಾಯಗಳಿಗೆ ಅಲ್ಲಿ ಸ್ಥಾನವೇ ಇರಲಿಲ್ಲ. ವಿಜ್ಞಾನವು ಚರ್ಚ್‌ನ ಕೆಲವು ನಂಬಿಕೆಗಳನ್ನು ಪ್ರಶ್ನಿಸಿತು; ಅವುಗಳು ತಪ್ಪು ಎಂದು ಪ್ರಯೋಗಗಳ ಮೂಲಕ ಸಾಬೀತುಪಡಿಸಿತು. ಈ ಬಗೆಯ ವೈಚಾರಿಕತೆಯು ತಾನು ಎತ್ತಿ ಹಿಡಿಯುವ ಧರ್ಮವನ್ನು ಅಲುಗಾಡಿಸುತ್ತಿದೆ ಎಂದು ಬಗೆದ ಚರ್ಚ್, ಅದನ್ನು ಹತ್ತಿಕ್ಕಲು ಪ್ರಯತ್ನಿಸಿತು. ಅದಕ್ಕಾಗಿ ಅಮಾನವೀಯ ಮಾರ್ಗಗಳನ್ನು ಹಿಡಿಯಿತು. ಆದರೂ, ವಿಜ್ಞಾನವು ಚರ್ಚ್ ಪ್ರತಿನಿಧಿಸುತ್ತಿದ್ದ ಧಾರ್ಮಿಕ ನಂಬಿಕೆಗಳ ಟೊಳ್ಳುತನವನ್ನು ಬಯಲಿಗೆ ತಂದು, ತನ್ನ ಗರಿಮೆಯನ್ನು ಮೆರೆಯಿತು.

ಹೀಗೆ ಅತೀಂದ್ರಿಯ ಜ್ಞಾನವೆಂದು ಹೇಳಲಾಗುವ ಧಾರ್ಮಿಕ ಅಥವಾ ಆಧ್ಯಾತ್ಮಿಕ ಜ್ಞಾನ ಮತ್ತು ಪ್ರಾಯೋಗಿಕ ವಿಧಾನಗಳಿಂದ ಕಂಡುಹಿಡಿದ ಲೌಕಿಕ ಜ್ಞಾನಗಳ ನಡುವೆ ಕಂಡುಬರುವ ಪ್ರಬಲ ವೈರುಧ್ಯ ಐತಿಹಾಸಿಕವಾದ ಒಂದು ತಥ್ಯಾಂಶ. ಆಧುನಿಕ ಕಾಲದಲ್ಲಿ ವಿಜ್ಞಾನವು ಮೇಲುಗೈ ಸಾಧಿಸಿದೆ ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ. ಏಕೆಂದರೆ, ನಮ್ಮ ಜೀವನವಿಧಾನವು ವಿಜ್ಞಾನವು ಕಂಡುಹಿಡಿದ ಉಪಕರಣಗಳ ಬಳಕೆಯ ಮೇಲೆ ಸಂಪೂರ್ಣವಾಗಿ ಆಧರಿಸಿದೆ. ಹಾಗೂ ಆಧುನಿಕ ಚಿಂತನೆಯು ಹೆಚ್ಚು ಹೆಚ್ಚು ಸಂದೇಹಭಾವದಿಂದ ಕೂಡಿದ್ದು, ಅದರಲ್ಲಿ ನಂಬಿಕೆ, ವಿಶ್ವಾಸಗಳ ಪಾತ್ರ ಗಣನೀಯವಾಗಿ ಕಡಿಮೆಯಾಗುತ್ತಿದೆ.

## ವೈಜ್ಞಾನಿಕ ಧರ್ಮ

ಇಂಥ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಚಿಂತನೆ ಹೆಚ್ಚು ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತದೆ ಎಂದು ಹೇಳಬಹುದು. ಏಕೆಂದರೆ ಒಬ್ಬ ಧಾರ್ಮಿಕ ಮುಖಂಡರಾದ ಅವರು, ಆಧುನಿಕ ವಿಜ್ಞಾನವು ಧರ್ಮದ ಹಾದಿಯನ್ನು ತುಳಿಯಬೇಕೆಂದೇನೂ ಹೇಳಲಿಲ್ಲ. ಅದಕ್ಕೆ ಬದಲಾಗಿ, ವಿಜ್ಞಾನದ ಸವಾಲನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗದಿದ್ದರೆ, ಧರ್ಮವು ಈಗಿನ ಯುಗದಲ್ಲಿ ಅಪ್ರಸ್ತುತವಾಗುತ್ತದೆಂಬ ಎಚ್ಚರಿಕೆಯನ್ನು ನೀಡಿದರು. ಅದಲ್ಲದೆ, ಧರ್ಮವು ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡು, ವೈಚಾರಿಕತೆಗೆ ಬದ್ಧವಾಗಿರಬೇಕು ಎಂದು ಒತ್ತಾಯ ಮಾಡಿದರು. ಅಲ್ಲಿಗೆ ನಿಲ್ಲದೆ, ಧರ್ಮವನ್ನು ವಿಜ್ಞಾನದಂತೆಯೇ ಅಧ್ಯಯನ ಮಾಡಬೇಕೆಂದೂ, ವೈಚಾರಿಕತೆಗೆ ನಿಲುಕದ ಧರ್ಮವು ಅಪ್ರಾಮಾಣಿಕವೆಂದೂ ಘೋಷಿಸಿದರು.

ಶ್ರೀರಾಮಕೃಷ್ಣ–ವಿವೇಕಾನಂದರ ಸಂದೇಶಗಳಲ್ಲಿ ಓತಪ್ರೋತವಾಗಿ ನಮಗೆ ಕಾಣಬರುವುದು ಸಮನ್ವಯದೃಷ್ಟಿ. ವಿಜ್ಞಾನ–ಧರ್ಮಗಳ ವಿಷಯದಲ್ಲಿಯೂ ಸ್ವಾಮೀಜಿ ಸಮನ್ವಯದ ಹಾದಿಯನ್ನೇ ತುಳಿಯುತ್ತಾರೆ. ಅವರ ಪ್ರಕಾರ, ವಿಜ್ಞಾನವು ತನ್ನ ವಿಧಾನಗಳನ್ನು ಬದಲಿಸಿಕೊಳ್ಳುವ ಆವಶ್ಯಕತೆ ಇಲ್ಲ. ಅದಕ್ಕೆ ಬದಲಾಗಿ ಧರ್ಮವೇ 'ವಿಜ್ಞಾನ'ವಾಗಬೇಕು. ಅಂದರೆ, ಯಾವ ವಿಧಾನ ಮತ್ತು ಪದ್ಧತಿಗಳಿಂದ ವಿಜ್ಞಾನವು ತಾನು ಕಂಡುಹಿಡಿದ ಅನ್ವೇಷಣೆಗಳನ್ನು ಸತ್ಯವೆಂದು ಸಮರ್ಥಿಸಿಕೊಳ್ಳುತ್ತದೆಯೋ, ಅದೇ ವಿಧಾನಗಳಿಂದ ಧರ್ಮವೂ ತನ್ನ ಸಿದ್ಧಾಂತಗಳನ್ನು ಸಮರ್ಥಿಸಿಕೊಳ್ಳಲು ಸನ್ನದ್ಧವಾಗಬೇಕು. ಆಗ ಮಾತ್ರ ವಿಜ್ಞಾನ ಮತ್ತು ಧರ್ಮಗಳ ಸಮನ್ವಯ ಸಾಧ್ಯ.

ಇದರಿಂದ ಧರ್ಮಕ್ಕೇ ಒಳಿತು ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು. ವೈಚಾರಿಕ ಧರ್ಮವು ತನ್ನ ಅಮುಖ್ಯ ಅಂಶಗಳನ್ನು ತ್ಯಜಿಸುತ್ತದೆ. ಹೀಗಾಗಿ ಅದು ವೈಜ್ಞಾನಿಕವಾಗಿ ಪರಿಣಮಿಸುವದು

ಮಾತ್ರವಲ್ಲ, ವಿಜ್ಞಾನದ ಶಾಖೆಗಳಂತೆ, ಸತ್ಯವನ್ನು ಎತ್ತಿತೋರಿಸುವ ತನ್ನ ಸಾಮರ್ಥ್ಯವನ್ನು ಅಧಿಕಗೊಳಿಸಿಕೊಳ್ಳುತ್ತದೆ. ವಿಜ್ಞಾನ ದಿಂದಾಗಲಿ, ಧರ್ಮದಿಂದಲಾಗಲಿ, ಸ್ವಾಮಿ ವಿವೇಕಾನಂದರಿಗೆ ಸತ್ಯಾನ್ವೇಷಣೆಯೇ ಪ್ರಧಾನ. ಸತ್ಯಾನ್ವೇಷಣೆಯನ್ನು ಪ್ರಾಮಾಣಿಕವಾಗಿ ಕೈಗೊಳ್ಳುವ ಯಾವುದೇ ವಿಧಾನ ಅವರಿಗೆ ಸ್ವಾಗತಾರ್ಹ. ವಿಜ್ಞಾನ ಮತ್ತು ಧರ್ಮಗಳ ನಡುವಣ ಘರ್ಷಣೆಯು ಅಂತಹ ಸತ್ಯಾನ್ವೇಷೆಯ ಉದಾತ್ತ ಪ್ರಕ್ರಿಯೆಗೆ ಬಾಧಕವಾಗಿ ನಿಂತಿದೆ. ಆದ್ದರಿಂದ ಅವುಗಳ ನಡುವೆ ಸಾಮರಸ್ಯವನ್ನು ತರಬೇಕು. ಆಗ ಸತ್ಯಾನ್ವೇಷಣೆಯ ಕಾರ್ಯವು ತ್ವರಿತವೂ ಉತ್ಕಟವೂ ಆಗುತ್ತದೆ. ಅದರಿಂದ ಮಾತ್ರ ಮಾನವಕುಲದ ಆತ್ಯಂತಿಕ ಕಲ್ಯಾಣ ಸಾಧ್ಯ.

ಈ ದಿಸೆಯಲ್ಲಿ ವೈಚಾರಿಕತೆಗೆ ಎಲ್ಲಕ್ಕಿಂತ ಹೆಚ್ಚು ಮಹತ್ವವನ್ನು ಸ್ವಾಮಿ ವಿವೇಕಾನಂದರು ನೀಡುತ್ತಾರೆ. ಅವರ ಪ್ರಕಾರ, ವಿಜ್ಞಾನದ ಬೆನ್ನೆಲುಬಾದ ವೈಚಾರಿಕತೆಯೇ ವಿವಿಧ ಧರ್ಮಗಳ ಅಭಿಪ್ರಾಯ ಗಳನ್ನು ಪರೀಕ್ಷಿಸುವ ಮಾಪಕವೂ ಆಗಬೇಕು. ಈ ಬಗೆಯ ವೈಚಾರಿಕ ವಿಧಾನದಿಂದ ಹೊರಬರುವ ಸತ್ಯವೇ ಧರ್ಮಕ್ಕೂ ಪ್ರಮಾಣೀಭೂತವಾಗಿ ನೆಲೆನಿಲ್ಲಬಲ್ಲುದೇ ಹೊರತು, ಕೇವಲ ಧಾರ್ಮಿಕ ಗ್ರಂಥಗಳು ಒಂದು ಧರ್ಮದ ಪ್ರಮಾಣವಾಗಲು ಸಾಧ್ಯವಿಲ್ಲ. ಇದಕ್ಕೆ ಕಾರಣ ವಿವಿಧ ಧರ್ಮಗಳಿಗೆ ಸೇರಿದ ಆ ಪುಣ್ಯಗ್ರಂಥಗಳಲ್ಲಿ ಬಗೆಬಗೆಯ ನಿಲುವುಗಳು ಕಂಡುಬರುತ್ತವೆ ಮಾತ್ರವಲ್ಲ, ಕೆಲವು ಅಭಿಪ್ರಾಯಗಳಂತೂ ಪರಸ್ಪರ ವಿರುದ್ಧವಾದ ಭಾವನೆಗಳನ್ನೇ ವ್ಯಕ್ತಪಡಿಸುತ್ತವೆ.

### ವೈಜ್ಞಾನಿಕ ವಿಧಾನಗಳು

ಸ್ವಾಮಿ ವಿವೇಕಾನಂದರ ಪ್ರಕಾರ ವೈಜ್ಞಾನಿಕ ಪ್ರಮಾಣವಿಧಾನಗಳು ಮೂರು ಬಗೆಯದಾಗಿವೆ. ಮೊದಲನೆಯದು, ಸಾಮಾನ್ಯೀಕರಣ (generalization). ಇದರ ಪ್ರಕಾರ, ಒಂದು ನಿರ್ದಿಷ್ಟ ಸಂಗತಿಗೆ (particular) ಒಂದು ಸಾರ್ವತ್ರಿಕವಾದ (general) ವಿವರಣೆ (explanation) ನೀಡಬೇಕು. ಆ ವಿವರಣೆಯನ್ನು ಮತ್ತೂ ವ್ಯಾಪಕವಾದ ವಿವರಣೆಯ ಮೂಲಕ ಸಾಧಿಸಿತೋರಿಸಲು ಪ್ರಯತ್ನಿಸಬೇಕು. ಹೀಗೆ ಪ್ರಯತ್ನಿಸುತ್ತ, ವಿಶ್ವಸಾರ್ವತ್ರಿಕವಾದ (universal) ವಿವರಣೆಯೊಂದಕ್ಕೆ ನಾವು ತಲುಪಬೇಕು. ಇದು ವಿಜ್ಞಾನದ ವಿಧಾನ. ಈ ಸಾರ್ವತ್ರಿಕ ವಿವರಣೆಗಳನ್ನೇ ನಾವು 'ನಿಯಮಗಳು' (laws) ಎನ್ನುವುದು. ಉದಾಹರಣೆಗೆ, ಮರದಿಂದ ಸೇಬಿನ ಹಣ್ಣು ಕೆಳಕ್ಕೆ ಬೀಳುವುದು ಒಂದು ನಿರ್ದಿಷ್ಟವಾದ ಘಟನೆ ಅಥವಾ ಸಂಗತಿ. ಅದಕ್ಕೆ ಒಂದು ವಿವರಣೆಯನ್ನು ಕೊಡಬೇಕು. ಸೇಬು ಮಾತ್ರವೇ ಕೆಳಕ್ಕೆ ಬೀಳುವುದಿಲ್ಲ; ಪ್ರಪಂಚದಲ್ಲಿರುವ ಎಲ್ಲ ವಸ್ತುಗಳೂ ಕೆಳಕ್ಕೆ ಬೀಳುತ್ತವೆ; ಆದ್ದರಿಂದ ಸೇಬೂ ಕೆಳಕ್ಕೆ ಬೀಳುತ್ತದೆ ಎನ್ನುವುದು ಒಂದು ಸಾರ್ವತ್ರಿಕ ವಿವರಣೆ. ಏಕೆ ಎಲ್ಲ ವಸ್ತುಗಳೂ ಕೆಳಕ್ಕೆ ಬೀಳುತ್ತವೆ? ಒಂದು ಶಕ್ತಿ ಅದನ್ನು ಕೆಳಕ್ಕೆ ಬೀಳುವಂತೆ ಮಾಡುತ್ತದೆ. ಅದು ಯಾವುದು? ಹೀಗೆ ಹೆಚ್ಚು ಹೆಚ್ಚು ಸಾರ್ವತ್ರಿಕವೂ ವ್ಯಾಪಕವೂ ಆದ ವಿವರಣೆಗಳನ್ನು ಕಂಡುಹಿಡಿಯುತ್ತ ಹೋಗಬೇಕು. ಈ ಬಗೆಯ ಅನ್ವೇಷಣೆಯ ಅಂತಿಮ ಘಟ್ಟವಾಗಿಯೇ ನ್ಯೂಟನ್ ವಿಶ್ವಸಾರ್ವತ್ರಿಕವಾದ ಗುರುತ್ವಾಕರ್ಷಕ ಶಕ್ತಿ (law of gravitation) ನಿಯಮವನ್ನು ಕಂಡುಹಿಡಿದನು. ಇದು ಎಲ್ಲ ವಸ್ತುಗಳು ಹಾಗೂ ಕಾಲದೇಶಗಳಿಗೂ ಅನ್ವಯಿಸುವ ನಿಯಮ..

ಸ್ವಾಮೀಜಿ ಹೇಳುವ ಎರಡನೆಯ ವೈಜ್ಞಾನಿಕ ವಿಧಾನವೆಂದರೆ, ಆಂತರಿಕ ವಿವರಣೆ(Inner forces for explanation). ವೈಜ್ಞಾನಿಕ ಚಿಂತನೆಯು, ಯಾವುದೇ ವಸ್ತು ತೋರ್ಪಡಿಸುವ ವಿಶಿಷ್ಟ ಪ್ರಕ್ರಿಯೆಗೆ, ಆ ವಸ್ತುವಿನಲ್ಲಿಯೇ ಇರುವ ಗುಣಧರ್ಮಗಳಲ್ಲಿಯೇ ವಿವರಣೆಯನ್ನು ಹುಡುಕುತ್ತ ಹೋಗುತ್ತದೆಯೇ ಹೊರತು, ಬಾಹ್ಯ ಪ್ರಭಾವಕ್ಕೆ ಅಷ್ಟು ಮಹತ್ವವನ್ನು ನೀಡುವುದಿಲ್ಲ. ಉದಾಹರಣೆಗೆ, ಸೇಬು ಮರದಿಂದ ಕೆಳಕ್ಕೆ ಬೀಳುವುದಕ್ಕೆ ಹಲವಾರು ವಿಧದ ವಿವರಣೆಗಳನ್ನು ಕೊಡಬಹುದು. ಒಬ್ಬ ದೈತ್ಯನು ಮೇಲೆ ಎಸೆದ ವಸ್ತುಗಳನ್ನೆಲ್ಲ ಹಿಡಿದು, ಕೆಳಕ್ಕೆ ಒಗೆಯುತ್ತಾನೆ ಎನ್ನುವುದು ಹಿಂದಿನ ಕಾಲದಲ್ಲಿ ಪ್ರಚಲಿತವಿದ್ದ ಒಂದು ವಿವರಣೆ. ಈ ಬಗೆಯ ವಿವರಣೆಯನ್ನು ಅವೈಜ್ಞಾನಿಕ ಎಂದು ನಾವು ಕರೆಯುತ್ತೇವೆ, ಏಕೆ? ರಾಕ್ಷಸನೊಬ್ಬ ಕೆಳಕ್ಕೆ ಒಗೆಯುವುದು ಬಾಹ್ಯರೀತಿಯ ವಿವರಣೆ. ಅದರಲ್ಲಿ ಸೇಬಿನ ಹಣ್ಣಿಗೇ ನಿರ್ದಿಷ್ಟವಾದ ಗುಣಧರ್ಮವನ್ನು ಗಣನೆಗೆ ತೆಗೆದುಕೊಂಡಿಲ್ಲ. ಆದರೆ ನ್ಯೂಟನ್ ಕಂಡುಹಿಡಿದ ಗುರುತ್ವಾಕರ್ಷಣ ಶಕ್ತಿಯನ್ನು ನಾವು ವೈಜ್ಞಾನಿಕ ವಿವರಣೆ ಎಂದು ಕರೆಯುತ್ತೇವೆ. ಅವನ ಸಿದ್ಧಾಂತದಲ್ಲಿ ಬೀಳುವ ವಸ್ತು ಮತ್ತು ಭೂಮಿ – ಈ ಎರಡು ಸಂಗತಿಗಳನ್ನು ಮಾತ್ರವೇ ಗಣನೆಗೆ ತೆಗೆದುಕೊಳ್ಳಲಾಗಿದೆ. ಬೀಳುವ ವಸ್ತುವಿನಲ್ಲಿ ಗುರುತ್ವಾಕರ್ಷಣೆಗೆ ಒಳಗಾಗುವ ಆಂತರಂಗಿಕ ಗುಣಧರ್ಮವನ್ನು ಕಾಣುತ್ತೇವೆ. ಭೂಮಿಯಲ್ಲಿ, ಮೇಲಕ್ಕೆ ಒಗೆದ ಎಲ್ಲವನ್ನೂ ಆಕರ್ಷಿಸುವ ಗುಣವನ್ನು ಕಾಣುತ್ತೇವೆ. ಇಲ್ಲಿ ಬೇರೆ ಯಾವ ಬಾಹ್ಯಪ್ರಭಾವಕ್ಕೂ ಅವಕಾಶವಿಲ್ಲ. ಹೀಗಾಗಿ ಇದು ವೈಜ್ಞಾನಿಕ ವಿವರಣೆ ಅಥವಾ ನಿಯಮ ಅನ್ನಿಸಿಕೊಳ್ಳುತ್ತದೆ.

ಮೂರನೆಯ ವಿಧಾನವೆಂದರೆ ವಿಕಾಸದ ನಿಯಮ (Law of Evolution). ವಿಕಸನವು ಕೂಡ ಹೊರಗಿನ ಯಾವುದೇ ವಿವರಣೆಯನ್ನು ಅಪೇಕ್ಷಿಸುವುದಿಲ್ಲ. ಈ ನಿಯಮದ ಮೂರು ಅಂಶಗಳು ಹೀಗಿವೆ: ೧. ಕಾರ್ಯವು (cause) ಕಾರಣವಲ್ಲದೆ (effect) ಬೇರೆಯಲ್ಲ. ಕಾರಣದ ಇನ್ನೊಂದು ಸ್ವರೂಪವೇ ಕಾರ್ಯ. ೨. ಕಾರ್ಯದಲ್ಲಿ ಕಾಣಬರುವ ಗುಣಧರ್ಮಗಳು ಕಾರಣದಲ್ಲಿಯೇ ಮೊದಲಿಗೆ ಸುಪ್ತವಾಗಿ ಇದ್ದವು. ೩. ಸೃಷ್ಟಿಯೆಂಬುದು ವಿಕಸನವೇ ಹೊರತು, ಶೂನ್ಯದಿಂದ ಉದ್ಭವವಾದದ್ದಲ್ಲ. ಉದಾಹರಣೆಗೆ, ಮಣ್ಣು ಮಡಕೆಯಾಗುತ್ತದೆ. ಮಣ್ಣು ಕಾರಣ; ಮಡಕೆ ಕಾರ್ಯ. ಮಡಕೆ ಮಣ್ಣಿನ ಇನ್ನೊಂದು ಸ್ವರೂಪವಲ್ಲದೆ ಬೇರೆಯಲ್ಲ. ಮಡಕೆಗೆ ಇರುವ ಗುಣಗಳು ಮಣ್ಣಿನಲ್ಲಿ ಈ ಮೊದಲೇ ಸುಪ್ತವಾಗಿ ಇದ್ದುದರಿಂದಲೇ, ಅದು ಮಡಕೆಯಾಗಲು ಸಾಧ್ಯವಾಯಿತು. ಮಡಕೆಯ ರೂಪದಲ್ಲಿ ಆ ಗುಣಗಳು ವ್ಯಕ್ತವಾದುವು, ಅಷ್ಟೆ. ಹಾಗೂ ಮಡಕೆ ಎಲ್ಲೋ ಶೂನ್ಯದಿಂದ ಹುಟ್ಟಲಿಲ್ಲ. ಈಗಾಗಲೆ ಇರುವ ಮಣ್ಣೇ ಇನ್ನೊಂದು ರೂಪ ತಳೆದು, ಮಡಕೆಯಾಯಿತು. ಅದೇ ರೀತಿ ಪ್ರಪಂಚವು ಅದು ಕಾಣಿಸಿಕೊಳ್ಳುವುದಕ್ಕಿಂತ ಮುಂಚೆ ಇದ್ದ ಯಾವುದೋ ಒಂದು ವಸ್ತುವು ಪರಿವರ್ತನೆಗೊಂಡ ರೂಪ ಅಷ್ಟೆ.

ಸ್ವಾಮಿ ವಿವೇಕಾನಂದರ ಪ್ರಕಾರ, ಯಾವುದೇ ಧಾರ್ಮಿಕ ಸಿದ್ಧಾಂತವು ಮೇಲಿನ ಮೂರು ವಿಧಾನಗಳನ್ನು ತನ್ನಲ್ಲಿ

ಒಳಗೊಂಡಿರಬೇಕು. ಆಗ ಮಾತ್ರ ಅದು ವೈಚಾರಿಕ ಧರ್ಮವಾಗಬಲ್ಲುದು. ವೈಚಾರಿಕ ಜಿಜ್ಞಾಸೆ ಮಾತ್ರವೇ ವೈಜ್ಞಾನಿಕವಾಗಬಲ್ಲುದು.

### ವೈಜ್ಞಾನಿಕ ಧರ್ಮವಾಗಿ ವೇದಾಂತ

ವೇದಾಂತವು ವೈಜ್ಞಾನಿಕ ಧರ್ಮವಾಗಬಲ್ಲುದು ಎನ್ನುವುದು ಸ್ವಾಮಿ ವಿವೇಕಾನಂದರ ನಿಲುವು. ಏಕೆಂದರೆ ಮೇಲೆ ಹೇಳಿದ ವೈಜ್ಞಾನಿಕ ವಿಧಾನಗಳನ್ನು ವೇದಾಂತದಲ್ಲಿ ಅಳವಡಿಸಬಹುದು. ಇದರಿಂದ ಹೊರಹೊಮ್ಮುವ ಸತ್ಯವು ವೈಚಾರಿಕ ಜಿಜ್ಞಾಸೆಯ ಫಲಸ್ವರೂಪದ್ದಾಗಿರುವುದೇ ಹೊರತು, ಕೇವಲ ನಂಬಿಕೆಯಾಗಿ ಇರುವುದಿಲ್ಲ.

**ಸಾಮಾನ್ಯೀಕರಣ:** ವೇದಾಂತವು ಪರಬ್ರಹ್ಮ ತತ್ತ್ವವನ್ನು ಪ್ರತಿಪಾದಿಸುತ್ತದೆ. ಈ ಪರಿಕಲ್ಪನೆಯು ಸಾಮಾನ್ಯೀಕರಣದ ನಿಬಂಧನೆಗಳನ್ನು ಸಮರ್ಥವಾಗಿ ಪೂರೈಸುತ್ತದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅವರ ಪ್ರಕಾರ ಬ್ರಹ್ಮವು ಎಲ್ಲ ಸಾರ್ವತ್ರಿಕ ನಿಯಮಗಳಿಗಿಂತ ಹೆಚ್ಚು ವ್ಯಾಪಕವಾಗಿದೆ. ಇದರಿಂದಾಗಿ ಬ್ರಹ್ಮವೆಂಬ ಪರಿಕಲ್ಪನೆಯನ್ನು ವಿಶ್ವಸಾರ್ವತ್ರಿಕವೆಂಬುದಾಗಿ ಪರಿಗಣಿಸಬಹುದು.

ಈ ಬಗೆಯ ವಿಶ್ಲೇಷಣಾ ವಿಧಾನದಲ್ಲಿ ಉಪನಿಷತ್ತುಗಳ ಮಾರ್ಗವನ್ನೇ ಸ್ವಾಮಿ ವಿವೇಕಾನಂದರು ಅನುಸರಿಸುತ್ತಿದ್ದಾರೆ ಎನ್ನುವುದು ಸುಸ್ಪಷ್ಟ. ಮುಂಡಕೋಪನಿಷತ್ತಿನ ಆರಂಭದಲ್ಲಿಯೇ ಶಿಷ್ಯನು ಗುರುವಿಗೆ ಈ ಪ್ರಶ್ನೆಯನ್ನು ಕೇಳುತ್ತಾನೆ: **ಕಸ್ಮಿನ್ ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ** – ಹೇ ಭಗವನ್! ಯಾವುದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತೆ ಆಗುತ್ತದೆ? – ಇದಕ್ಕೆ ಉತ್ತರರೂಪವಾಗಿಯೇ ವೇದಾಂತ ಜಿಜ್ಞಾಸೆ ಹೊರಹೊಮ್ಮಿದೆ.

ಪರಬ್ರಹ್ಮ ತತ್ತ್ವವು ಚೈತನ್ಯಸ್ವರೂಪದ್ದಾಗಿದೆ. ಚೈತನ್ಯವೆಂದರೆ, ಸತ್–ಚಿತ್–ಆನಂದಗಳನ್ನೇ ತನ್ನ ಅವಿನಾಭಾವ ಸ್ವರೂಪವಾಗಿ ಹೊಂದಿರುವಂಥದ್ದು. ಆಧುನಿಕ ವಿಜ್ಞಾನವು ಕಂಡುಹಿಡಿಯಲು ಪ್ರಯತ್ನಿಸುತ್ತಿರುವ ಸಂಪೂರ್ಣ ಅಸ್ತಿತ್ವದ ಏಕತತ್ತ್ವವು ತನ್ನ ಪರಾಕಾಷ್ಠತೆಯನ್ನು ತಲುಪುವುದು ಪರಬ್ರಹ್ಮದ ಪರಿಕಲ್ಪನೆಯಲ್ಲಿ. **ಸತ್** ಎಂದರೆ ಪರಿಶುದ್ಧ ಅಸ್ತಿತ್ವ. ಅದು ಜಗತ್ತಿನ ಎಲ್ಲ ವಸ್ತುಗಳಲ್ಲಿಯೂ ಕಂಡುಬರುವಂಥದು. **ಚಿತ್** ಎಂದರೆ ಜ್ಞಾನ ಅಥವಾ ಪ್ರಕಟವಾಗುವಂಥದು. ಯಾವುದು ಅಸ್ತಿತ್ವವನ್ನು ಹೊಂದಿದೆಯೋ ಅದು ಪ್ರಕಟವಾಗಲೇಬೇಕು. ಹೀಗೆ ಈ ಅಂಶ ಕೂಡ ಜಗತ್ತಿನ ಎಲ್ಲ ವಸ್ತುಗಳಿಗೆ ಅನ್ವಯಿಸುತ್ತದೆ. ಹಾಗೆಯೇ, ಯಾವುದು ಪ್ರಕಟವಾಗುತ್ತದೆಯೋ ಅದು, ಅನುಭವಕ್ಕೆ ಬರಬೇಕು. ಈ ಅಂಶವನ್ನು **ಆನಂದ** ಎಂಬ ಶಬ್ದವು ಸೂಚಿಸುತ್ತದೆ. ಹೀಗೆ, ಯಾವುದು ಅಸ್ತಿತ್ವದಲ್ಲಿ ಇದೆಯೋ, ಪ್ರಕಟವಾಗುವುದೋ ಹಾಗೆಯೇ ಅನುಭವಕ್ಕೆ ಬರುವುದೋ ಅದೇ ಪರಬ್ರಹ್ಮ. ಇವು ಜಗತ್ತಿನ ಎಲ್ಲ ವಸ್ತುಗಳಲ್ಲೂ ಕಂಡುಬರುವ ಸಮಾನ ಅಂಶಗಳು. ಇವುಗಳ ಜೊತೆಗೆ ನಾಮ ಅಥವಾ ಹೆಸರು ಮತ್ತು ರೂಪಗಳು ಸೇರಿಕೊಂಡಾಗ ಮಾತ್ರವೇ ವೈವಿಧ್ಯತೆ ಕಾಣಿಸಿಕೊಳ್ಳುತ್ತದೆ. ಆದರೆ

> **ಧರ್ಮವನ್ನು ಕುರಿತಂತೆ ವೈಚಾರಿಕ ಶೋಧನೆಯ ಸಫಲತೆಯನ್ನು ಒಪ್ಪದವರು ನನ್ನ ದೃಷ್ಟಿಯಲ್ಲಿ ಸ್ವ-ವಿರೋಧಿಗಳಂತೆ ಕಾಣುತ್ತಾರೆ. (ವಿವಿಧ ಧರ್ಮಗಳ) ಶಾಸ್ತ್ರಗಳು ಪರಸ್ಪರ ಹೋರಾಡುತ್ತಿರುವಾಗ ತಾವೇ ನ್ಯಾಯಾಧಿಪತಿಗಳಾಗಲಾರವು. ಈ ಶಾಸ್ತ್ರಗಳಿಗಿಂತ ಮತ್ತಾವುದೋ ಸರ್ವವ್ಯಾಪಿಯಾಗಿರಬೇಕು. ಈ ಪ್ರಪಂಚದಲ್ಲಿ ಜಾರಿಯಲ್ಲಿರುವ ನೀತಿಸಂಹಿತೆಗಳಿಗಿಂತ ಮತ್ತಾವುದೋ ಮೇಲಿರಬೇಕು. ... ಇಲ್ಲಿ ನಾವು ಯುಕ್ತಿಗೆ ಮೊರೆಯಿಡುತ್ತೇವೆ ಎನ್ನುವುದು ನಿರ್ವಿವಾದ.**
> – ಸ್ವಾಮಿ ವಿವೇಕಾನಂದ

ನಾಮರೂಪಗಳು ಪರಿವರ್ತನಾಶೀಲ ಅಂಶಗಳು. ಆದ್ದರಿಂದ ಅವುಗಳನ್ನು ಆತ್ಯಂತಿಕ ಸತ್ಯವೆಂದು ಕರೆಯಲಾಗದು. ಹೀಗಾಗಿ ಸತ್–ಚಿತ್–ಆನಂದ ಈ ಅಂಶಗಳು ಮಾತ್ರವೇ ಒಂದು ವಸ್ತುವಿನಲ್ಲಿ ಸತ್ಯವನ್ನು ದೃಢೀಕರಿಸಬಹುದಾದ ಸಂಗತಿಗಳು. ಈ ಅಂಶಗಳೇ ತನ್ನ ಸ್ವರೂಪಭೂತವಾಗಿರುವ ವಿಶ್ವಸಾರ್ವತ್ರಿಕ ತತ್ತ್ವವನ್ನು **ಬ್ರಹ್ಮನ್** ಎಂದು ಉಪನಿಷತ್ತುಗಳು ಹೆಸರಿಸುತ್ತವೆ. ಹೀಗಾಗಿ ಇಡೀ ಅಸ್ತಿತ್ವವನ್ನು ಬ್ರಹ್ಮತತ್ತ್ವದ ರೂಪದಲ್ಲಿ ನಾವು ಸಾಮಾನ್ಯೀಕರಿಸಬಹುದು. ಸ್ವಾಮಿ ವಿವೇಕಾನಂದರ ಪ್ರಕಾರ, ವಿಜ್ಞಾನದ ಪರಮಧ್ಯೇಯವೇ ವಿಶ್ವಸಾಮಾನ್ಯೀಕರಣ. ಅದು ವೇದಾಂತವು ಬೋಧಿಸುವ ಪರಬ್ರಹ್ಮದ ಪರಿಕಲ್ಪನೆಯಲ್ಲಿ ತನ್ನ ಸುಸಂಪನ್ನತೆಯನ್ನು ಪಡೆದುಕೊಳ್ಳುತ್ತದೆ ಹಾಗೂ ಜಗತ್ತಿನ ಎಲ್ಲ ವಸ್ತು–ಕ್ರಿಯೆಗಳ ಸಮಂಜಸ ವಿವರಣೆ ನಮಗೆ ಈ ಮೂಲಕ ದೊರೆಯುತ್ತದೆ.

**ಆಂತರಿಕ ವಿವರಣೆ:** ಸಾಮಾನ್ಯೀಕರಣದ ಅತ್ಯಂತ ಉನ್ನತ ನಿಷ್ಕರ್ಷೆಯಾದ ಪರಬ್ರಹ್ಮ ತತ್ತ್ವವು ವಿಜ್ಞಾನದ ಎರಡನೆಯ ನಿಬಂಧನೆಯಾದ ಆಂತರಿಕ ವಿವರಣೆಯ ಆವಶ್ಯಕತೆಯನ್ನೂ ಸಮರ್ಥವಾಗಿ ಪೂರೈಸುತ್ತದೆ. ಇದರ ಪ್ರಕಾರ ಯಾವುದೇ ವಿವರಣೆಯು ಆಂತರಂಗಿಕವಾಗಿರಬೇಕೇ ಹೊರತು ಬಾಹ್ಯ ಸಂಗತಿಗಳಿಂದ ಬಂದದ್ದಾಗಿರಬಾರದು. ಬ್ರಹ್ಮದ ಪರಿಕಲ್ಪನೆಯು ಅಂತಹ ಆಂತರಂಗಿಕ ವಿವರಣೆಯಾಗಿದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ದೇವರು ಜಗತ್ತನ್ನು ಶೂನ್ಯದಿಂದ ಸೃಷ್ಟಿಸಿದನೆಂದು ಅನ್ಯ ಧರ್ಮಗಳು ಹೇಳುತ್ತವೆ. ಅವುಗಳ ಪ್ರಕಾರ ದೇವರು ಮತ್ತು ಜಗತ್ತು – ಈ ಎರಡು ತತ್ತ್ವಗಳು ವಿಭಿನ್ನವಾದುವು. ಹೀಗೆ ಜಗತ್ತಿನ ಸೃಷ್ಟಿಗೆ ಬಾಹ್ಯಕಾರಣವನ್ನು ಅವು ನೀಡುತ್ತವೆ. ಆದರೆ ವೇದಾಂತವು ಬ್ರಹ್ಮವೇ ಜಗತ್ತಿನ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ ಎಂದು ಹೇಳುತ್ತದೆ. **ನೇಹ ನಾನಾಸ್ತಿ ಕಿಂಚನ** – 'ಇರುವುದೆಲ್ಲವೂ ಬ್ರಹ್ಮವೇ, ಅದನ್ನು ಬಿಟ್ಟು ಬೇರೇನೂ ಇಲ್ಲ' ಎನ್ನುವುದೇ ಉಪನಿಷತ್ತುಗಳ ಪಲ್ಲವಿ. ಹೀಗೆ ಜಗತ್ತಿನ ಕಾಣ್ಕೆಗೆ ಯಾವುದೇ ಬಾಹ್ಯ ವಿವರಣೆಯನ್ನು ನೀಡಲು ವೇದಾಂತವು ನಿರಾಕರಿಸುತ್ತದೆ. ಈ ಬಗೆಯ ವಿಶ್ಲೇಷಣಾ ವಿಧಾನವು ಆಧುನಿಕ ವಿಜ್ಞಾನದ ರೀತಿನೀತಿಗಳಿಗೆ ಸಮಂಜಸವಾಗಿ ಒಪ್ಪುತ್ತದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

**ವಿಕಾಸದ ನಿಯಮ:** ಸೃಷ್ಟಿವಿಕಾಸದ ನಿಯಮದಲ್ಲಿ ಇರುವ ಮೂರು ಅಂಶಗಳ ಬಗ್ಗೆ ನಾವು ಈಗಾಗಲೇ ತಿಳಿದುಕೊಂಡಿದ್ದೇವೆ.

ಅವುಗಳೆಲ್ಲವನ್ನೂ ಸುಲಭವಾಗಿ ವೇದಾಂತದ ವ್ಯಾಖ್ಯಾನದಲ್ಲಿ ಅಳವಡಿಸಿಕೊಳ್ಳಬಹುದು.

೧. **ಕಾರ್ಯವು ಕಾರಣವಲ್ಲದೆ ಬೇರೆಯಲ್ಲ; ಕಾರಣದ ಇನ್ನೊಂದು ಸ್ವರೂಪವೇ ಕಾರ್ಯ:** ವೇದಾಂತದ ಪ್ರಕಾರ ಬ್ರಹ್ಮವು ಅಂತಹ ಕಾರಣವಸ್ತು. ಅಸ್ತಿತ್ವದಲ್ಲಿವೆ ಎಂದು ಹೇಳಲಾಗುವ ಎಲ್ಲ ವಸ್ತುಗಳೂ ಈ ಬ್ರಹ್ಮವಸ್ತುವಲ್ಲದೆ ಬೇರೆಯಲ್ಲ. ಬ್ರಹ್ಮವೇ ಎಲ್ಲ ಕಾರ್ಯಜಾತ ವಸ್ತುಗಳ ಆಧಾರಾಂಶವಾಗಿದೆ.

೨. **ಕಾರ್ಯದಲ್ಲಿ ಕಾಣಬರುವ ಗುಣಧರ್ಮಗಳು ಕಾರಣದಲ್ಲಿಯೇ ಮೊದಲಿಗೆ ಸುಪ್ತವಾಗಿ ಇದ್ದವು :** ಜಗತ್ತು ಜಡ. ಆದ್ದರಿಂದ ಮಿಥ್ಯೆ. ಅದರ ಅಸ್ತಿತ್ವವನ್ನು ವೇದಾಂತವು ನಿರಾಕರಿಸಿ, ಇರುವುದೆಲ್ಲವೂ ಚೈತನ್ಯವೇ ಎಂದು ಹೇಳುತ್ತದೆ. ಸತ್–ಚಿತ್–ಆನಂದಗಳು ಚೈತನ್ಯದ ಸ್ವರೂಪಲಕ್ಷಣಗಳು. ಅವೇ ನಾವು ಭ್ರಮೆಯಿಂದ ಭಾವಿಸುವ ಪ್ರತಿಯೊಂದು ವಸ್ತುವಿನ ಸಾಮಾನ್ಯ ಮತ್ತು ಶಾಶ್ವತವಾಗಿರುವ ಅಂಶಗಳು. ಹೀಗಾಗಿ ಮುಖ್ಯಕಾರಣವಾದ ಪರಬ್ರಹ್ಮವಸ್ತುವಿನ ಸ್ವರೂಪಲಕ್ಷಣಗಳನ್ನೇ ನಾವು ಕಾರ್ಯವಸ್ತುವಾದ ಈ ಜಗತ್ತಿನಲ್ಲಿಯೂ ಪರಿಭಾವಿಸುತ್ತೇವೆ.

೩. **ಸೃಷ್ಟಿಯೆಂಬುದು ವಿಕಸನವೇ ಹೊರತು, ಶೂನ್ಯದಿಂದ ಉದ್ಭವವಾದದ್ದಲ್ಲ:** ವೇದಾಂತವು ಆತ್ಯಂತಿಕ ಸೃಷ್ಟಿವಾದವನ್ನು ಒಪ್ಪುವುದಿಲ್ಲ. ಪರಬ್ರಹ್ಮವೇ ಜಗತ್ತಾಗಿ ವಿಕಸನಗೊಂಡಂತೆ ಕಾಣಿಸಿಕೊಳ್ಳುತ್ತದೆ ಎಂದು ಅದು ಪ್ರತಿಪಾದಿಸುತ್ತದೆ. **ಬಹುಸ್ಯಾಂ ಪ್ರಜಾಯೇಯ ಇತಿ** – ಬ್ರಹ್ಮವು ಮೊದಲು ಒಂದೇ ಆಗಿತ್ತು. ಅನಂತರ, ತಾನು ಬಹುವಾಗುತ್ತೇನೆ ಎನ್ನುವ ಪ್ರಜ್ಞೆ ಅದಕ್ಕೆ ಉದ್ಭವಿಸಿತು. ಇದು ಸೃಷ್ಟಿಯ ವಿಕಸನಕ್ಕೆ ಉಪನಿಷತ್ತುಗಳು ನೀಡುವ ಒಂದು ರೂಪಕ.

ಸ್ವಾಮಿ ವಿವೇಕಾನಂದರ ವಿಕಾಸವಾದವು ಜೈವಿಕಸ್ತರಕ್ಕೆ ಮಾತ್ರ ಸೀಮಿತವಾದುದಲ್ಲ. ಮಾನವನು ತನ್ನಲ್ಲಿ ಸುಪ್ತವಾಗಿರುವ ಚೈತನ್ಯದ ಅರಿವನ್ನು ಹೆಚ್ಚುಹೆಚ್ಚಾಗಿ ಮಾಡಿಕೊಂಡಂತೆಲ್ಲ, ಆಧ್ಯಾತ್ಮಿಕ ವಿಕಾಸವುಂಟಾಗುತ್ತದೆ. ಈ ಬಗೆಯ ಪ್ರಜ್ಞಾವಿಕಾಸದಿಂದ, ವಿಶ್ವಪ್ರಜ್ಞೆಯಾದ ಪರಬ್ರಹ್ಮದಲ್ಲಿ ಅವನು ತನ್ನ ತಾದಾತ್ಮ್ಯವನ್ನು ಪಡೆದುಕೊಳ್ಳುತ್ತಾನೆ. ಹೀಗೆ ಸ್ವಾಮೀಜಿ ವಿಕಾಸವಾದವನ್ನು ಉದಾತ್ತೀಕರಿಸಿ, ಆಧ್ಯಾತ್ಮಿಕ ಆಯಾಮವನ್ನು ಅದಕ್ಕೆ ನೀಡುತ್ತಾರೆ. ಆ ಮೂಲಕ ವಿಜ್ಞಾನ ಮತ್ತು ಧರ್ಮಗಳೆರಡೂ ಅನ್ವೇಷಿಸುತ್ತಿರುವ ಸತ್ಯವು, ಚೈತನ್ಯ ಅಥವಾ ಪರಬ್ರಹ್ಮವೆಂಬ ವಿಶ್ವಸಾರ್ವತ್ರಿಕ ಪರಿಕಲ್ಪನೆಯಲ್ಲಿ ಮಾತ್ರವೇ ದೊರಕುತ್ತದೆ ಎಂಬ ಸಂಗತಿಯನ್ನು ಒತ್ತಿ ಹೇಳುತ್ತಾರೆ.

## ವೇದಾಂತದಲ್ಲಿ ವೈಜ್ಞಾನಿಕ ಅನ್ವೇಷಣಾ ವಿಧಾನಗಳು

ಸ್ವಾಮಿ ವಿವೇಕಾನಂದರು ಸತ್ಯಾನ್ವೇಷಣೆಯಲ್ಲಿ ವೈಜ್ಞಾನಿಕ ವಿಧಾನಗಳನ್ನೇ ವೇದಾಂತವೂ ಅನುಸರಿಸುತ್ತದೆ ಎಂದು ತೋರಿಸಿಕೊಡುತ್ತಾರೆ. ವಿಜ್ಞಾನವು ಅಂತಹ ಸತ್ಯವನ್ನು ಕಂಡುಹಿಡಿಯಲು ಇನ್ನೂ ಪ್ರಯತ್ನಿಸುತ್ತದೆ. ಆದರೆ ವೇದಾಂತವು ಪರಬ್ರಹ್ಮಾನುಭೂತಿಯಲ್ಲಿ ಈ ಬಗೆಯ ಅನ್ವೇಷಣೆಯ ಸುಸಂಪನ್ನತೆಯನ್ನು ಈಗಾಗಲೇ ಗಳಿಸಿಕೊಂಡಿದೆ. ಇಂದಿನ ಆಧುನಿಕ ವಿಜ್ಞಾನದ ವಿಧಾನಗಳನ್ನು ಬಳಸಿಯೇ ವೇದಾಂತವು ಈ ಬಗೆಯ ನಿಷ್ಕರ್ಷೆಗೆ ಬಂದಿದೆ. ಆ ವಿಧಾನಗಳು ಹೀಗಿವೆ: ೧. ನಮ್ಮ ಅನುಭವಕ್ಕೆ ಬರುವ ಸಂಗತಿಗಳ ಪರಿವೀಕ್ಷಣೆ ಮತ್ತು ವಿಶ್ಲೇಷಣೆ (observation and analysis of facts of our experience). ೨. ತಥ್ಯಾಂಶಗಳನ್ನು ಕಂಡುಹಿಡಿಯಲು ಇವುಗಳಿಂದ ಕಂಡುಬಂದ ಫಲಾಂಶಗಳ ಸಮಗ್ರಸಂಯೋಜನೆ (synthetic combination of the results obtained to find out the facts).

## ಏಕತತ್ತ್ವದ ಅನ್ವೇಷಣೆ

ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಲ್ಲಿ ವೇದಾಂತ ಪ್ರಚಾರವನ್ನು ಮಾಡುತ್ತಿರುವಾಗ, ವಿಜ್ಞಾನದ ಜಗತ್ತಿನಲ್ಲಿ ಆಗ ಪ್ರಚಲಿತವಿದ್ದ ಎರಡು ಸಿದ್ಧಾಂತಗಳು ಅವರ ಮೇಲೆ ಪರಿಣಾಮ ಬೀರಿದವು. ೧. **ವಿಕಾಸವಾದ ಮತ್ತು** ೨. **ಶಕ್ತಿ ವಿನಿಯಮ ನಿಯಮ** (Law of conservation of Energy). ಅದಲ್ಲದೆ, ಏಕತತ್ತ್ವದ ಅನ್ವೇಷಣೆಯೇ ಎಲ್ಲ ವೈಜ್ಞಾನಿಕ ಸಂಶೋಧನೆಗಳ ತಾಯಿಬೇರು ಎನ್ನುವ ಮೂಲಭೂತ ಸಿದ್ಧಾಂತವೂ ಅವರನ್ನು ಬಹುವಾಗಿ ಬೆರಗುಗೊಳಿಸಿರಲೇಬೇಕು. ಹೀಗಾಗಿ ಅವರು, ಧರ್ಮ ಮತ್ತು ವಿಜ್ಞಾನಗಳೆರಡರ ಅನ್ವೇಷಣೆಗಳ ಅಂತ್ಯವೇ ಈ 'ಏಕತತ್ತ್ವ' ಎಂದು ಪ್ರತಿಪಾದಿಸುತ್ತಾರೆ. ಶಿಕಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ತಾವು ಪ್ರಸ್ತುತಪಡಿಸಿದ ಹಿಂದೂಧರ್ಮದ ಮೇಲಿನ ತಮ್ಮ ಪ್ರಬಂಧದಲ್ಲಿ, "ವಿಜ್ಞಾನವೆಂದರೆ ಏಕತೆಯನ್ನು ಕಂಡುಹಿಡಿಯುವ ವಿಧಾನವಲ್ಲದೆ ಬೇರೆಯಲ್ಲ" ಎಂದು ಅವರು ಹೇಳುತ್ತಾರೆ. ಅಲ್ಲಿ ಅವರು, ಎಲ್ಲ ಭೌತಿಕ ಶಕ್ತಿಗಳೂ, ಕೇವಲ ಯಾವುದರ ಅಭಿವ್ಯಕ್ತಿಗಳೋ ಅಂತಹ, ಸಾಮಾನ್ಯ ಶಕ್ತಿ ಅಥವಾ ಬಲದ ಅನ್ವೇಷಣೆಯನ್ನು ವಿಜ್ಞಾನವು ಕೈಗೊಂಡಿರುವುದನ್ನು ಪ್ರಸ್ತಾಪಿಸುತ್ತಾರೆ.

ಸ್ವಾಮಿ ವಿವೇಕಾನಂದರು ತಮ್ಮ ಪತಂಜಲಿ ಯೋಗಸೂತ್ರಗಳ ಮೇಲಿನ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ: "ವಿಜ್ಞಾನದ ಅಂತಿಮ ಘಟ್ಟ ಮತ್ತು ಧ್ಯೇಯ ಏಕತೆಯನ್ನು ಕಂಡುಹಿಡಿಯುವುದೇ ಆಗಿದೆ. ಎಂತಹ ಏಕತೆಯೆಂದರೆ, ಬಹುತ್ವವು ಯಾವುದರಿಂದ ಮೂಡಿಬಂದು ಉತ್ಪನ್ನವಾಗಿದೆಯೋ, ಯಾವುದು ಒಂದೇ ಆಗಿದ್ದರೂ ಬಹುವಾಗಿರುವಂತೆ ಕಾಣುವುದೋ ಅಂಥದ್ದು." ಮತ್ತೊಂದು ಕಡೆ ಅವರು ಹೇಳುತ್ತಾರೆ, "ಎಲ್ಲ ವಸ್ತುಗಳೂ ಒಂದೇ ಬಲದ ವಿವಿಧ ಅಭಿವ್ಯಕ್ತಿಗಳು ಮಾತ್ರವೇ ಎಂದು ವಿಜ್ಞಾನವು ಇಂದು ಹೇಳುತ್ತಿದೆ. ಇರುವುದೆಲ್ಲದರ ಒಟ್ಟುಮೊತ್ತವೇ ಆ ಶಕ್ತಿ." ಈ ಅಂಶವನ್ನು ಅವರು ಮತ್ತೂ ಹೀಗೆ ವಿವರಿಸುತ್ತಾರೆ: "ಎಲ್ಲ ಶಕ್ತಿಗಳನ್ನೂ, ಅವುಗಳಿಗೆ ಆಧಾರವಾದ ಏಕಮೇವ ಶಕ್ತಿಯ ಅನ್ವೇಷಣೆಯಲ್ಲಿ, ನಿಧಾನವಾಗಿ ಏಕೀಕೃತಗೊಳಿಸಲಾಗುತ್ತಿದೆ."

ಸ್ವಾಮಿ ವಿವೇಕಾನಂದರು ಮೇಲಿನ ಹೇಳಿಕೆಗಳಲ್ಲಿ ನುಡಿದ ಭವಿಷ್ಯವಾಣಿ ತದನಂತರ ಸತ್ಯವಾಗಿ ಪರಿಣಮಿಸಿದ್ದನ್ನು ನೋಡುತ್ತೇವೆ. ವಿದ್ಯುತ್ ಶಕ್ತಿ ಮತ್ತು ಕಾಂತೀಯ ಶಕ್ತಿಗಳ ಸಮನ್ವಯತೆಯನ್ನು ವಿಜ್ಞಾನಿಗಳು ಕಂಡುಹಿಡಿದರು. ಇದರಿಂದ ವಿದ್ಯುತ್ಕಾಂತೀಯ ಕ್ಷೇತ್ರವೆಂಬ ಸಮನ್ವಯ ಪರಿಕಲ್ಪನೆಯು ಮೂಡಿಬಂದಿತು. ಅದಲ್ಲದೆ ಬೆಳಕು ಒಂದು ವಿದ್ಯುತ್ಕಾಂತೀಯ